ಶ್ರೀ ಜಿ. ಎಸ್... ಬೊಮ್ಮೇಗೌಡ.—ಗೊತ್ತಿದೆ ಯೆಂದು ಉತ್ತರ ಹೇಳಿದ್ದೀರಿ. ಮಾರ್ಕೆಟ್ ದರಕ್ಕೂ ನಕ್ಕರೆ ಕಾರ್ಖಾನೆಯವರು ಒದಗಿಸಿರುವ ದರಕ್ಕೂ ವ್ಯತ್ಯಾಸವೇನು?

ಶ್ರೀ ಎಚ್. ಸಿದ್ದವೀರಪ್ಪ.—ಮಾರ್ಕೆಟ್ಟಿನಲ್ಲಿ ಮಾರಾಟ ಮಾಡುವುದರ ಬೆಲೆಯಲ್ಲಿ ವಾರ ವಾರಕ್ಕೂ ವ್ಯತಾಸವಿರುತ್ತದೆ. ಯಾವ ವಾರದ ಬೆಲೆಯೆಂದು ಕೇಳಿದರೆ ಹೇಳಬಹುದು. ನಕ್ಕರೆ ಕಂಪೆನಿಯವರು ರೂಪಾಯಿ 294-4-0ಗೆ ಕೊಂಡಿದ್ದಾರೆ. ಮಾರ್ಕೆಟ್ ದರ ಇತ್ತೀಚೆಗೆ ಇಳಿಮುಖವಾಗುತ್ತಾ ಒಂದೊಂದು ವಾರ ಒಂದೊಂದು ರೀತಿಯಲ್ಲಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ನಕ್ಕರೆ ಕಂಪೆನಿಯವರು ಒದಗಿಸಿದ ದರಕ್ಕೂ ಆಗ್ಗೆ ಮಂಡ್ಯ ರೈತ ಸಂಘದಲ್ಲಿದ್ದ ದರಕ್ಕೂ 80 ರೂಪಾಯಿಗಳ ವ್ಯತ್ಯಾಸ ವಿತ್ತೆಂದರೆ ಒಪ್ಪುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಇತ್ತು.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಇದರಿಂದಾಗಿ ಟಿಗೆ 80 ರೂಪಾಯಿ ವ್ಯತ್ಯಾಸವಾಗಿ ರೈತರಿಗೆ ಅನೇಕ ಲಕ್ಷ ರೂಪಾಯಿಗಳು ನಷ್ಟವಾಗಿದೆಯೆಂದರೆ ಒಪ್ಪುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಕೊಂಡಂಥ ದರ ಆ ಹೊತ್ತು ಮಾರ್ಕೆಟ್ಟಿನಲ್ಲಿ ಇದ್ದ ದರದಂತೆ. ಅವರು ವ್ಯಾಪಾರ ಮಾಡುವುದಕ್ಕೆ ಕೊಂಡುಕೊಂಡಿಲ್ಲ. ರೈತನಿಗೆ ಮುಖ್ಯವಾಗಿ ಅನುಕೂಲ ಮಾಡಬೇಕೆಂದು ಮಾಡಿದ್ದಾರೆ. ಯಾವ ಬೆಲೆಗೆ ಕೊಂಡಿದ್ದಾರೋ ಆ ಬೆಲೆಗೆ ಮಾರಾಟ ಮಾಡಿದ್ದಾರೆ. ಅಲ್ಲದೆ ರೈತರಿಗೇನೂ ಅವರು ಇದೇ ದರದಲ್ಲಿ ಕೊಂಡುಕೊಳ್ಳಲೇ ಬೇಕೆಂದು ನಿರ್ಬಂಧವಿರಲಿಲ್ಲ. ಮಾರ್ಕೆಟ್ಟಿನಲ್ಲಿ ಕಮ್ಮಿ ದರಕ್ಕೆ ಸಿಕ್ಕುವಹಾಗಿದ್ದರೆ ಕೊಂಡುಕೊಳ್ಳಬಹುದಾಗಿತ್ತು.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಆಯಾ ಕಾಲದಲ್ಲಿ ಮಾರ್ಕೆಟ್ಟಿನಲ್ಲಿ ಯಾವ ದರವಿರುತ್ತದೆಯೋ ಆ ದರದಂತೆ ರೈತರಿಗೆ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಪ್ರತಿವರ್ಷವೂ ಒಂದು ವರ್ಷಕ್ಕೆ ಎಷ್ಟು ಬೇಕೆಂಬುದನ್ನು anticipate ಮಾಡಿಕೊಂಡು ಕೊಂಡಿರುತ್ತಾರೆ. ಹಿಂದಿನ ವರ್ಷ 1953-54ಕ್ಕೆ ಬಹಳ ಕಮ್ಮಿ ದರಕ್ಕೆ ಸಿಕ್ಕಿತ್ತು. ಯಾವಾಗಲೂ ಮುಂಗಡವಾಗಿ ಕೊಂಡುಕೊಳ್ಳಬೇಕೇ ಹೊರತು ಆಗಾಗ್ಗೆ ಕೊಂಡು ಕೊಳ್ಳುವುದಕ್ಕಾಗುವುದಿಲ್ಲ. ಈ ಸಾರಿ sudden fall ಆಯಿತು. ಆದುದರಿಂದ ದರದಲ್ಲಿ 80 ರೂಪಾಯಿ 100 ರೂಪಾಯಿ difference ಆಗಿದೆಯೆಂದು ಕಂಡು ಬಂದಿದೆ.

Mr. SPEAKER.—The point is, at the same time the Co-operative Society is selling at Rs. 100 less than the price available in the Sugar Factory.

Sri H. SIDDAVEERAPPA.—It is quite possible for this reason: The Co-operative Societies might have purchased it at a time when the ruling rate was Rs. 80 or 100, less.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈ ರೀತಿಯಾಗಿ ದೊಡ್ಡ ಕಾರ್ಖಾನೆಯದ್ದು, ರೈತನೇ ಅದಕ್ಕೆ ಬೆನ್ನು ಮೂಳೆಯೆಂದಿರುವಾಗ ಕೇವಲ 3 ಲಕ್ಷ ರೂಪಾಯಿಗಳ ನಷ್ಟವಾಗಿದ್ದರೆ ಅದನ್ನು ಕಾರ್ಖಾನೆಯವರೇ ವಹಿಸುವುದು ಕರ್ತವ್ಯವಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—Loss ಆಗಿದೆಯೆಂದು ನಾನು ಒಪ್ಪುವುದಿಲ್ಲ. ಆಗಿನ ruling rate ಮೇಲೆ ಕೊಂಡುಕೊಂಡಿದ್ದಾರೆ. Incidental charges ಹಾಕಿ ಮಾರಾಟ ಮಾಡಿದ್ದಾರೆ. ಅಷ್ಟೇಹೊರತು ಯಾವ ನಷ್ಟವೂ ಆಗಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ತಾವು ಮಾಡಿದಂಥ ಕಾಲದಲ್ಲಿ ಮಾರ್ಕೆಟ್ಟಿನ ದರ ಕಡಮೆಯಿರಲಿಲ್ಲವೇ? ಅದೇ ರೀತಿ ಕಮ್ಮಿ ದರದಂತೆ ಮಾಡಿಕೊಂಡು ರೈತ ಸಹಕಾರ ಸಂಘದವರು ಕೊಡುತ್ತಿದ್ದರಲ್ಲವೇ?

Sri H. SIDDAVEERAPPA.—I do not know what they were doing with the stock they were having.

12-30 P.M.

Sri A. BHEEMAPPA NAIK.—Is it not proper that you should sell any commodity at market rate?

Sri H. SIDDAVEERAPPA.—It is not correct to sell it, incurring a loss.

Sri A. BHEEMAPPA NAIK.—To-day you may gain some thing, because you purchase the commodity at a lower rate. If the market rate is something, it is but proper that you should sell it at market rate, irrespective of gain or loss.

Mr. SPEAKER.—The Hon'bl Member need not enter into on argument. The question hour is intended only to elicit information.

Sri A. BHEEMAPPA NAIK.—Is it not proper, is it not fair that you should sell it at market rate, irrespective of the purchase rate?

Sri H. SIDDAVEERAPPA.—What is proper, what is fair and all that is a matter of opinion.

ಶ್ರೀ ವಿ. ಆರ್. ನಾಯ್ಡು.—ಈಗ ಈ ಪ್ರಶ್ನೆಯನ್ನು ಕಳುಹಿಸಿರತಕ್ಕ ಮಾನ್ಯ ಸದಸ್ಯರು ಅಲ್ಲಿ ಲಕ್ಷಾಂತರ ರೂಪಾಯಿಗಳ ಲುಕ್ಸಾನಾಗಿದೆ ಎಂದು ಹೇಳುತ್ತಾರೆ. ಸರ್ಕಾರದವರು ಲುಕ್ಸಾನಾಗಿಲ್ಲ ಎಂದು ಹೇಳುತ್ತಾರೆ. ಈ ಎರಡರಲ್ಲಿ ನಾವು ಯಾವುದನ್ನು ಪ್ರಾಮಿ ನಂಬುವುದು? ತಾವು ಅಧ್ಯಕ್ಷರೇ ಸ್ವಲ್ಪ ದಯಮಾಡಿ ನಾವು ಯಾವುದನ್ನು ಒಪ್ಪಿಕೊಳ್ಳಬೇಕೆಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ಈ ಸಂಬಂಧದಲ್ಲಿ ನಾವು ಏನನ್ನೂ ಹೇಳುವ ಹಾಗಿಲ್ಲ.

Mining in Arasikere Taluk.

Q.—656. **Sri K. PANCHAKSHARIAH** (Arasikere).—

Will the Government be pleased to state :—

(*a*) the places where mining is carried on in Arasikere Taluk; the minerals available in Arasikere Taluk;

(*b*) the quantity of corundum mined in Kalyadi Village per year;

(*c*) whether Government have thought of taking up this enterprise ?

A.—Sri H. SIDDAVEERAPPA (Minister for Home and Industries).—

(*a*)— *Place*	*Mining for mineral*
(i) Bageshapura	... China clay.
(ii) Bilenahalli, Appennhalli, Jadagatte Villages	... Soapstone.
(iii) Lakshmidevarahalli	... Chromite.
(iv) Kalyadi	... Corundum.

(*b*) *Year*	*Quantity*
1952	... 284 tons.
1953	... 55·2 ,,
1954	... 531·25 ,,

(*c*) No.

ಶ್ರೀ ಕೆ. ಪಂಚಾಕ್ಷರಯ್ಯ.—ತಾವು ನನ್ನ ಪ್ರಶ್ನೆಗೆ ಉತ್ತರ ಒದಗಿಸಿರುವುದರಲ್ಲ ಇಲ್ಲ ಕೇವಲ ನಾಲ್ಕು ಖನಿಜಸಂಪತ್ತುಗಳು ಮಾತ್ರ ಇವೆಯೆಂದು ಹೇಳಿದ್ದೀರಿ. ಹಾಗಾದರೆ ಇಲ್ಲ ಮತ್ತೆ ಯಾವ ಬೇರೆ ಖನಿಜಸಂಪತ್ತು ಗಳೂ ಇಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ತಿಳಿದು ಬಂದಿರುವ ಮಟ್ಟಿಗೆ ನಿಮ್ಮ ತಾಲ್ಲೂಕಿನಲ್ಲ ಇನ್ನಾವ ಕಲ್ಲಿಗೂ ಅಷ್ಟು ಪ್ರಾಶಸ್ತ್ಯವಿಲ್ಲವೆಂದು ತಿಳಿದು ಬಂದಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಇದನ್ನು ತಾವು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ !

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಸರ್ಕಾರದವರು ತಯಾರಿಸಿರತಕ್ಕ ಆಧಾರಗಳ ಮೇಲೆ ಹೇಳುತ್ತಿದ್ದೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಆ ತಪಶೀಲುಗಳನ್ನು ಅವರು ಯಾವಾಗ ತಯಾರು ಮಾಡಿದ್ದು ?

ಶ್ರೀ ಎಚ್. ಸಿದ್ದವೀರಪ್ಪ.—ಬಹಳ ದಿವಸಗಳಾಗಿವೆ.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಗೆ ಒಂದು ಸರ್ವೆ ಪರಿಶೀಲನೆ ನಡೆಸಿದ್ದು ಯಾವಾಗ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ನಮ್ಮಲ್ಲಿರತಕ್ಕ ರೇಟೆಸ್ಟ್ ಅಂಕಿ ಅಂಶಗಳ ಆಧಾರದ ಮೇಲೆ ಇದನ್ನು ತಿಳಿಸಲಾಗಿದೆಯೆಂದು ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈಗ ತಾವು ಈ ಕೊರಂಗದ ಕಲ್ಲು ಎಷ್ಟು ಸಿಕ್ಕುತ್ತದೆಯೆಂದು ಕೇಳಿರುವುದಕ್ಕೆ ಟನ್ನುಗಳ ಲೆಕ್ಕ ಹೇಳಿದ್ದೀರಿ. ಇದನ್ನು ಯಾರ ನಿರ್ಧರಮಾಡಿರುವವರು ? ಇದರ ಲೆಕ್ಕಾಚಾರ ಮಾಡಿರುವವರ ಯಾರು ?

Sri H. SIDDAVEERAPPA.—As collected by the Department.

ಶ್ರೀ ಕೆ. ಪಂಚಾಕ್ಷರಯ್ಯ.—ನಾನು ಕೇಳುತ್ತಿರುವುದು—ತಾವೀಗ ತಯಾರುಮಾಡಿರತಕ್ಕ ಲೆಕ್ಕಗಳು ಸರ್ಕಾರದವರಿಂದ ಮಾಡಿದವುಗಳೋ ಅಥವಾ ಖಾಸಗೀ ಮೈನಿಂಗ್ ಸಂಸ್ಥೆಯವರು ತಯಾರಿಸಿರುವ ಲೆಕ್ಕಗಳೋ ಎಂದು.

ಶ್ರೀ ಎಚ್. ಸಿದ್ದವೀರಪ್ಪ.—ಈಗ ನಮ್ಮಲ್ಲ ವರ್ಷ ವರ್ಷದ ಲೆಕ್ಕಗಳೂ ಇವೆ. ಈ ಲೆಕ್ಕಗಳನ್ನು ಸರ್ಕಾರದವರೇ ಮಾಡಲ ಅಥವಾ ಮೈನಿಂಗ್ ಕಂಪೆನಿಯವರೇ ಮಾಡಲ, ಇಬ್ಬರಿಗೂ ಇದನ್ನು ತಯಾರಿಸಲು ಇರತಕ್ಕ ಆಧಾರ ಮಾತ್ರ ಒಂದೇ. ಆದರಲ್ಲೀನೂ ವ್ಯತ್ಯಾಸ ವಾಗುವುದಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಆ ಕಂಪನಿಯವರು ಈಗ ಈ ಕಲ್ಲು ಎಷ್ಟು ಖರ್ಚಾಗುತ್ತಾ ಇದೆಯೆಂದು ಸರ್ಕಾರಕ್ಕೆ ತಿಳಿಸಿದ್ದಾರೆ ? ಎಷ್ಟು ಕಲ್ಲನ್ನು ಅವರೀಗ ತೆಗೆಯುವುದು ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಎಷ್ಟು ಕಲ್ಲುಗಳನ್ನು ತೆಗೆಯುತ್ತಾರೋ ಅದು ನನ್ನಲ್ಲಿ ಈಗ ಇಲ್ಲ. ಅಂತೂ ಅವರು ಎಷ್ಟು ಕಲ್ಲುಗಳನ್ನು ಈಗ ತೆಗೆಯುತ್ತಿದ್ದಾರೋ ಅಷ್ಟನ್ನೂ ಮಾರಾಟ ಮಾಡುತ್ತಿದಾರೆಂಬುದಕ್ಕೆ ನಮ್ಮಲ್ಲ ಲೆಕ್ಕವಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ಕೊರಂಗದ ಕಲ್ಲಿನಿಂದ ಅವರಿಗೆ ಎಷ್ಟು ಫಾಯಿದೆ ಬಂದಿದೆಯೆಂಬ ಅಂತ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರಿಗೆಷ್ಟು ಲಾಭ ಬಂದಿದೆ ಎನ್ನುವುದು ನಮಗೆ ಗೊತ್ತಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—1954ರಲ್ಲಿ 531·25 ಟನ್ ಕಲ್ಲನ್ನು ತೆಗೆಸಿದ್ದರೆಂದು ತಿಳಿಸಲಾಗಿದೆ. ಅದನ್ನೆಲ್ಲಾ 16,250 ರೂಪಾಯಿಗಳಿಗೆ ಮಾರಾಟ ಮಾಡಲಾಗಿದೆ. ಇದರಿಂದ ಅವರಿಗೀಗ ಲುಕ್ಸಾನಾಗಿದೆಯೆಂಬ ಅಂಶ ತಮಗೆ ತಿಳಿದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರಿಗೆ ಇದರಲ್ಲ ಲಾಭವಾಗಿದೆಯೇ ಅಥವಾ ಲುಕ್ಸಾನಾಗಿದೆಯೇ ಎನ್ನುತಕ್ಕ ಅಂತ ನಮಗೆ ತಿಳಿದು ಬಂದಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಗಾದರೆ ಈಗ ಆ ಮೈನಿಂಗ್ ಕಂಪೆನಿಯವರಿಗೆ ಇದರಿಂದ ಲುಕ್ಸಾನಾಗುತ್ತಿರುವ ಅಂಶ ನಿಮ್ಮ ಗಮನಕ್ಕೇ ಬಂದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ತೆಗೆಯುತ್ತಿರುವ ಕಲ್ಲೆಲ್ಲಾ ಹೊರಗಡೆಗೆ ರಫ್ತಾಗುತ್ತಿದೆಯೆಂದು ನಮಗೆ ತಿಳಿದು ಬಂದಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈಗ ಆ ಉದ್ಯಮದಿಂದ ಅವರಿಗೆ ಲುಕ್ಸಾನಾಗುತ್ತಿರುವ ಕಾರಣ ಇದನ್ನು ನಿಲ್ಲಿಸಬೇಕೆಂದಿರುವ ಅಭಿಪ್ರಾಯ ನಿಮ್ಮ ಗಮನಕ್ಕೆ ಬಂದಿಲ್ಲವೋ !

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಗೇನಾದರೂ ಅಂಥ ಸಂದರ್ಭ ಒದಗಿದರೆ ಆಗ ಸರ್ಕಾರದವರು ಆ ಉದ್ಯಮ ನಡೆಸಲು ಅದನ್ನು ತಾವು ಕೈಗೊಳ್ಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಊಹಾಪೋಹದ ಪ್ರಶ್ನೆ. ಅಂಥ ಪ್ರಸಂಗ ನಡೆದಾಗ ಅದನ್ನು ಸರ್ಕಾರ ಪರ್ಯಾಲೋಚಿಸುತ್ತದೆ.

ಶ್ರೀ ಕೆ. ಲಕ್ಕಪ್ಪ.—ಅರಸೀಕೆರೆಗೆ ಪಕ್ಕದ ತಾಲ್ಲೂಕುಗಳಲ್ಲ ಈ ತೆರನಾದ ಕಲ್ಲು ಸಿಕ್ಕುವುದಿಲ್ಲವೇ !

ಶ್ರೀ ಎಚ್. ಸಿದ್ದವೀರಪ್ಪ.—ನೋ ಟೇಟ್ಸ್.

Road from Kunthur Doddi to Rampura in Channapatna Taluk.

Q.—8. Sri V. VENKATAPPA (Channapatna Constituency).—

Will the Government be pleased to state :—

(*a*) whether they have acquired and for laying out a road from Kunthur Doddi to Rampura in Channapatna Taluk ;